# ಬಾಲ್ಯ ಸ್ನೇಹಿತನನ್ನು ಸಚಿವರಿಗೆ ಪರಿಚಯಿಸಿದ ಹೊರಟ್ಟಿ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ವಿಶಾಲ ಹೃದಯದವರಿಗೆ ಲೋಕವೇ ಕುಟುಂಬ, ನಗು ಮೊಗದ ವ್ಯಕ್ತಿಗೆ ಪ್ರಪಂಚದಲ್ಲೆಲ್ಲಾ ಸ್ನೇಹಿತರು. ಇಂಥವರ ಸಾಲಿಗೆ ಮೊದಲಿಗರಾಗಿ ಇರುವ ಸಭಾಪತಿ ಬಸವರಾಜ ಹೊರಟ್ಟಿ ಅವರು ಸ್ನೇಹವೇ ಸಂಪತ್ತು ಎಂದು ಭಾವಿಸಿದವರು.

ಇತ್ತೀಚಿಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪನವರು ಹೊರಟ್ಟಿ ಅವರ ತವರೂರಾದ ಯಡಹಳ್ಳಿಯಲ್ಲಿ ದೇಶದಲ್ಲೇ ಮಾದರಿಯಾದ ಶಾಲೆಯನ್ನು ತಮ್ಮ ತಂದೆವರಾದ ಶಿವಲಿಂಗಪ್ಪನವರ ಸ್ಮರಣಾರ್ಥ ಸಮಾಜಕ್ಕೆ ನೀಡಿದ್ದಾರೆ.

ಈ ಶಾಲೆಯನ್ನು ವೀಕ್ಷಿಸಲು ಸಚಿವರು ಹೋದ ಸಂದರ್ಭದಲ್ಲಿ ಅಪಾರ ಜನಜಂಗುಳಿಯಲ್ಲಿ ಹೊರಟ್ಟಿ ಅವರು ತನ್ನ ಬಾಲ್ಯ ಸ್ನೇಹಿತನನ್ನ ಅಪ್ಪಿಕೊಂಡು ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿರುವಾಗ ನನ್ನ ಕ್ಲಾಸ್‌ಮೇಟ್ ಈತ ಎಂದು ಅಡಿವಪ್ಪ ಸೀತವ್ವ ಗೋಳನನ್ನು ಸಚಿವರಿಗೆ ಪರಿಚಯಿಸಿದ್ದು, ಸಭಾಪತಿಗಳ ಸರಳತೆಗೆ ಸಾಕ್ಷಿಯಾಗಿತ್ತು.



# ಬಾಲ್ಯ ಸ್ನೇಹಿತನನ್ನ ಶಿಕ್ಷಣ ಸಚಿವರಿಗೆ ಪರಿಚಯಿಸಿದ ಬಸವರಾಜ್ ಹೊರಟ್ಟಿ

ಕನ್ನಡ ಜನಶ್ರೀ ಸುದ್ದಿ ಜಾಲ

ಯಡಹಳ್ಳಿ: ವಿಶಾಲ ಹೃದಯದವರಿಗೆ ಲೋಕವೇ ಕುಟುಂಬ ನಗು ಮೊಗದ ವ್ಯಕ್ತಿಗೆ ಪ್ರಪಂಚದಲ್ಲೆಲ್ಲಾ ಸ್ನೇಹಿತರು ಇಂಥವರ ಸಾಲಿಗೆ ಮೊದಲಿಗರಾಗಿ ಇರುವ ಸಭಾಪತಿ ಬಸವರಾಜ ಹೊರಟ್ಟಿ ಅವರು ಸ್ನೇಹವೇ ಸಂಪತ್ತು ಎಂದು ಭಾವಿಸಿದವರು. ಈ ಮಾತನ್ನ ನೆನಪಿಸಿಕೊಳ್ಳುವ ಸಂದರ್ಭ ಏಕೆ ಬಂತು ಎಂದು ತಾವೆಲ್ಲ ಯೋಚಿಸಬಹುದು. ಕಾರಣ ಒಂದು ಅಪರೂಪದ ಭಾವನಾತ್ಮಕ ಸನ್ನಿವೇಶ ಹೊರಟ್ಟಿ ಅವರ ಹುಟ್ಟೂರಾದ ಯಡಹಳ್ಳಿಯಲ್ಲಿ ನಡೆಯಿತು.

ಇತ್ತೀಚಿಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪನವರು ಹೊರಟ್ಟಿ ಅವರ ತವರೂರಾದ ಯಡಹಳ್ಳಿಯಲ್ಲಿ ದೇಶದಲ್ಲೇ ಮಾದರಿಯಾದ ಶಾಲೆಯನ್ನು ಹೊರಟ್ಟಿಯವರು ತಮ್ಮ ತಂದೆವರಾದ ಶಿವಲಿಂಗಪ್ಪನವರ ಸ್ಮರಣಾರ್ಥ ಸಮಾಜಕ್ಕೆ ನೀಡಿದ್ದಾರೆ. ಈ ಶಾಲೆಯನ್ನು ವೀಕ್ಷಿಸಲು ಸಚಿವರು ಹೋದ ಸಂದರ್ಭದಲ್ಲಿ ಅಪಾರ ಜನಜಂಗುಳಿಯಲ್ಲಿ ಹೊರಟ್ಟಿ ಅವರು ಒಮ್ಮಿಂದೊಮ್ಮೆಲೆ ಹೇ ಮಗನ ಅಡಿವೆಪ್ಪ ಇಲ್ಲಿ ಯಾಕ್ ಬಂದಿಯೋ ಮಗನ ಎಂದಾಗ ಸಚಿವರು ಕೆಲ ಕ್ಷಣ ಮೌನ ಆಗ ಅಡಿವೆಪ್ಪ ಏ ಬಸಪ್ಪ ನಿನ್ನನ್ನು ನೋಡಾಕ ಬಂದೇನೋ ಎಂದಾಗ ಸಚಿವರು ಒಮ್ಮೆ



ಅಡಿವಪ್ಪನ ಮುಖ ಮತ್ತೊಮ್ಮೆ ಹೊರಟ್ಟಿ ಅವರ ಮುಖ ನೋಡುತ್ತಾ ಕೆಲ ಕ್ಷಣ ಮೌನವಾಗಿ ನಿಂತರು. ಆಗ ಹೊರಟ್ಟಿ ಅವರು ತನ್ನ ಬಾಲ್ಯ ಸ್ನೇಹಿತನನ್ನ ಅಪ್ಪಿಕೊಂಡು ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿರುವಾಗ ನನ್ನ ಕ್ಲಾಸ್ಮೆಂಟ್ ಈತ ಎಂದು ಅಡಿವಪ್ಪ ಸೀತವ್ವ ಗೋಳನನ್ನು ಸಚಿವರಿಗೆ ಪರಿಚಯಿಸಿ ಬಾಳ ಉಡಾಳ ಹುಂಬ ಇದ್ದ ಈ ಮಗ ಎಂದು ತಮ್ಮ ಸ್ನೇಹಿತ ಅಡಿವೆಪ್ಪ ಸೀತವ್ವಗೋಳನ ಬಾಲ್ಯ ಪುರಾಣವನ್ನು ಸಚಿವರ ಮುಂದೆ ಬಿಚ್ಚಿಟ್ಟರು. ಹತ್ತು ಹನ್ನೆರಡು ವರ್ಷದ ವಯಸ್ಸಿನ ಬಾಲ್ಯ ಸ್ನೇಹಿತರು ಇವರು 65 ವರ್ಷದ ಹಿಂದಿನ ಸ್ನೇಹವನ್ನು ಹೊರಟ್ಟಿ ಅವರು ಇಂದಿಗೂ ಮರೆತಿಲ್ಲ ಅದೇ ಪ್ರೀತಿ ಅದೇ ಒಡನಾಟ ಅದೇ ಸಲುಗೆ ಹೀಗಾಗಿ ಅವರು ಸ್ನೇಹಕ್ಕೆ ನೀಡುವ ಬೆಲೆ ಅತ್ಯಂತ ದೊಡ್ಡದು. ಸ್ನೇಹವೇ ಅವರ ಅಪಾರ ಸಂಪತ್ತು. ಎಷ್ಟೇ ಎತ್ತರಕ್ಕೆ ಬೆಳೆದರೂ ಹುಟ್ಟೂರನ್ನ ಬಾಲ್ಯ ಸ್ನೇಹಿತರನ್ನ ನೆರವು ನೀಡಿದ ಆತ್ಮೀಯರನ್ನು ಇಂದಿಗೂ ಮರೆಯದೆ ಸ್ನೇಹ ಸಂಬಂಧವನ್ನು ಜೋಪಾನವಾಗಿ ಕಾಯ್ದುಕೊಂಡು ಬಂದಿದ್ದಾರೆ. ಇಂತಹ ಅಪರೂಪದ ಭಾವನಾತ್ಮಕ ಸನ್ನಿವೇಶ ನೋಡಿದ ಸಚಿವರು ಹೊರಟ್ಟಿ ಅವರ ಸಂಬಂಧ ಸ್ನೇಹ ದೊಡ್ಡತನ ನಮಗೆಲ್ಲ ಮಾದರಿ ಎಂದು ತಮ್ಮ ಮನದಾಳದ ಮಾತುಗಳನ್ನು ಆಡಿದರು.

ಕಳೆದ ಅರ್ಧ ಶತಮಾನಕ್ಕೂ ಹೆಚ್ಚು ಸಾರ್ವಜನಿಕ ಜೀವನದಲ್ಲಿ ಬಸವರಾಜ್ ಹೊರಟ್ಟಿ ಅವರು ಇದ್ದಾರೆ. ಸ್ನೇಹವೆಂದರೆ ಸಂಸ್ಕೃತದಲ್ಲಿ ಜಿಡ್ಡು (ಪಸೆ)ಎಂದು ಅರ್ಥವಿದೆ. ಸ್ನೇಹವು ಜಿಡ್ಡಿನಿಂದ ಅಂಟಿಕೊಳ್ಳುವ ಗುಣ. ಸ್ನೇಹದಲ್ಲಿ ಜಿಡ್ಡಿನಿಂದ ಕೂಡಿದ ಎಣ್ಣೆಯಂತೆ ಬೆಳಕು ನೀಡುವ ಶಕ್ತಿಯು ಇದೆ. ಇಂತಹ ಗುಣ ಹೊಂದಿದ ಹೊರಟ್ಟಿ ಅವರು ಸ್ನೇಹಕ್ಕೆ ಸದಾ ಹೊಸ ಬೆಳಕು ನೀಡುತ್ತಾ ಬಂದಿದ್ದಾರೆ. ಹೀಗಾಗಿ ಕಳೆದು ಐದು ದಶಕಗಳಿಂದ ಸಾರ್ವಜನಿಕ ಜೀವನದಲ್ಲಿ ಒಂದು ಕಪ್ಪು ಚುಕ್ಕೆ ಇಲ್ಲದೆ ಸಣ್ಣವರಿರಲಿ ದೊಡ್ಡವರಿರಲಿ ಯಾವುದೇ ಜಾತಿ ಮತ ಪಂಥ ನೋಡದೆ ಎಲ್ಲರೊಳಗೊಂದಾಗಿ ಅವನಾರವ ಅವ ನಾರವ ಎಂದೆನಿಸದೆ ಅವ ನಮ್ಮವ ಅವ ನಮ್ಮವ ಎಂಬ ಬಸವಣ್ಣನವರ ಮಾತನ್ನ ಜೀವನದುದ್ದಕ್ಕೂ ಪಾಲಿಸಿಕೊಂಡ ಬಂದ ಹೊರಟ್ಟಿ ಅವರು ನಮ್ಮ ಮಧ್ಯೆ ಒಬ್ಬ ಅಪರೂಪದ ನಾಯಕರಾಗಿ ಇದ್ದಾರೆ ಎಂಬ ಹೆಮ್ಮೆ ಅವರೆಲ್ಲ ಹಿತೈಷಿ ಬಳಗಕ್ಕಿದೆ. ಎಲ್ಲ ಸಂಪತ್ತಿ ಗಿಂತ ಸ್ನೇಹ ಸಂಪತ್ತು ದೊಡ್ಡದು ಎಂದು ಬದುಕಿನಲ್ಲಿ ಅಳವಡಿಸಿಕೊಂಡ ಬಂದ ನಿದರ್ಶನಕ್ಕೆ ಅಡಿವೆಪ್ಪ ಮತ್ತು ಬಸವರಾಜ್ ಹೊರಟ್ಟಿ ಅವರ ಸ್ನೇಹವೇ ಸಾಕ್ಷಿ.

CMYK